# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| **ಸದಸ್ಯರ ಹೆಸರು** | : | ಶ್ರೀ. ಕೆ.ಎ. ತಿಪ್ಪೇಸ್ವಾಮಿ (ನಾಮ ನಿರ್ದೇಶನ ಹೊಂದಿದವರು) |
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | : | 987 (983) |
| **ಉತ್ತರ ದಿನಾಂಕ** | : | 23/02/2024 |
| **ಉತ್ತರಿಸುವವರು** | : | ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು |

<table>
<tr><th>ಕ್ರ ಸಂ</th><th>ಪ್ರಶ್ನೆ</th><th colspan="2">ಉತ್ತರಗಳು</th></tr>
<tr><td>ಅ</td><td>ತುಂಗಾ-ಭದ್ರಾ ಜಲಾಶಯದಿಂದ ಬರಪೀಡಿತ ತಾಲ್ಲೂಕುಗಳಾದ ಪಾವಗಡ ಚಳ್ಳಕೆರೆ. ಮೊಣಕಾಲ್ಮೂರು ಚಿತ್ರದುರ್ಗ ಹಾಗೂ ಇತರೆ ತಾಲ್ಲೂಕುಗಳಿಗೆ ಕುಡಿಯುವ ನೀರನ್ನು ಸರಬರಾಜು ಮಾಡುವ ಯೋಜನೆಗೆ ನಿಗದಿಪಡಿಸಿರುವ ಯೋಜನೆ ಅಂದಾಜು ಮೊತ್ತ ಎಷ್ಟು ವಿಭಾಗವಾರು ಪೂರ್ಣ ಮಾಹಿತಿ ನೀಡುವುದು;</td><td colspan="2">ತುಂಗಾ-ಭದ್ರಾ ಜಲಾಶಯದಿಂದ ಬರಪೀಡಿತ ತಾಲ್ಲೂಕುಗಳಾದ ಪಾವಗಡ ಚಳ್ಳಕೆರೆ, ಮೊಣಕಾಲ್ಮೂರು ಚಿತ್ರದುರ್ಗ ಹಾಗೂ ಇತರೆ ತಾಲ್ಲೂಕುಗಳಿಗೆ ಕುಡಿಯುವ ನೀರನ್ನು ಸರಬರಾಜು ಮಾಡುವ ಯೋಜನೆಗೆ ನಿಗದಿಪಡಿಸಿರುವ ಯೋಜನೆಯ ಅಂದಾಜು ಮೊತ್ತ ರೂ. 2528.63 ಕೋಟಿಗಳಾಗಿರುತ್ತದೆ. ವಿಭಾಗವಾರು ಅಂದಾಜು ಮೊತ್ತ ಈ ಕೆಳಕಂಡಂತಿವೆ.<br>ರೂ ಕೋಟಿಗಳಲ್ಲಿ<br><table><tr><th>ತುಮಕೂರು ಜಿಲ್ಲೆ</th><th>ಚಿತ್ರದುರ್ಗ ಜಿಲ್ಲೆ</th><th>ವಿಜಯನಗರ ಜಿಲ್ಲೆ</th></tr><tr><td>667.00</td><td>1100.00</td><td>761.63</td></tr></table></td></tr>
<tr><td rowspan="2">ಆ</td><td rowspan="2">ಈ ಯೋಜನೆ ಅಡಿ ಕೈಗೊಂಡಿರುವ ವಿವಿಧ ಕಾಮಗಾರಿಗಳು ಯಾವುವು; ಮತ್ತು ಅವುಗಳ ಅನುಷ್ಠಾನ ಯಾವ ಹಂತದಲ್ಲಿವೆ; ಮತ್ತು ಯೋಜನೆಗೆ ಖರ್ಚಾಗಿರುವ ಹಣವೆಷ್ಟು; ಜಿಲ್ಲಾವಾರು ಮತ್ತು ತಾಲ್ಲೂಕುವಾರು ಪೂರ್ಣ ಮಾಹಿತಿ ನೀಡುವುದು?</td><td>ತುಮಕೂರು ಜಿಲ್ಲೆ (ಪಾವಗಡ ತಾಲ್ಲೂಕು)</td><td>ಪಾವಗಡ ತಾಲ್ಲೂಕಿಗೆ ಕುಡಿಯುವ ನೀರನ್ನು ಸರಬರಾಜು ಮಾಡುವ ಯೋಜನೆಯಲ್ಲಿ<br>1. 179 ಓ.ಹೆಚ್.ಟಿ ಗಳು ಯೋಜಿಸಿದ್ದು, ಎಲ್ಲಾ ಓ.ಹೆಚ್.ಟಿ ಗಳು ಪೂರ್ಣಗೊಂಡಿರುತ್ತವೆ.<br>2. 14 ZBR/ZBT ಗಳು ಯೋಜಿಸಿದ್ದು, ಎಲ್ಲಾ ZBR/ZBT ಪೂರ್ಣಗೊಂಡಿರುತ್ತವೆ.<br>3. 2 IPS ಗಳು ಯೋಜಿಸಿದ್ದು, ಎಲ್ಲಾ IPS ಗಳು ಪೂರ್ಣಗೊಂಡಿರುತವೆ.<br>4. 1 MBR ಇದ್ದು ಪೂರ್ಣಗೊಂಡಿರುತ್ತವೆ.<br>5. 672 ಕಿ. ಮೀ ಪೈಪ್ ಲೈನ್ ಯೋಜಿಸಿದ್ದು, ಇದರಲ್ಲಿ 670 ಕಿ. ಮೀ ಪೈಪ್ ಲೈನ್ ಪೂರ್ಣಗೊಂಡಿರುತ್ತದೆ.<br>6. ಅಂದಾಜು ಮೊತ್ತ ರೂ.667.00 ಕೋಟಿಗಳಲ್ಲಿ ರೂ. 275.21 ಕೋಟಿ ವೆಚ್ಚ ಭರಿಸಲಾಗಿರುತ್ತದೆ.</td></tr>
<tr><td>ಚಿತ್ರದುರ್ಗ ಜಿಲ್ಲೆ (ಮೊಣಕಾಲ್ಮೂರ, ಚಳ್ಳಕೆರೆ, ತುರುವೆಕೆರೆ ತಾಲ್ಲೂಕು)</td><td>1. 329 ಓ.ಹೆಚ್.ಟಿ ಗಳು ನಿರ್ಮಿಸಬೇಕಾಗಿದ್ದು, 328 ಓ.ಹೆಚ್.ಟಿ ಗಳು ಪೂರ್ಣಗೊಂಡಿರುತ್ತವೆ. 1 ಓ.ಹೆಚ್.ಟಿ ಯು ಪ್ರಗತಿಯಲ್ಲಿರುತ್ತದೆ.<br>2. 24 ZBR/ZBT ಗಳು ಯೋಜಿಸಿದ್ದು, ಎಲ್ಲಾ ZBR/ZBT ಪೂರ್ಣಗೊಂಡಿರುತ್ತವೆ.<br>3. 6 IPS ಗಳು ಯೋಜಿಸಿದ್ದು, ಎಲ್ಲಾ IPS ಗಳು ಪೂರ್ಣಗೊಂಡಿರುತವೆ.<br>4. 1303.39 ಕಿ.ಮೀ ಪೈಪ್‌ಲೈನ್ ಯೋಜಿಸಿದ್ದು, 1273.39 ಕಿ.ಮೀ ಪೂರ್ಣಗೊಂಡಿರುತ್ತದೆ. ಇನ್ನು 30 ಕಿ.ಮೀ ಕೊಳವೆ ಮಾರ್ಗವನ್ನು ಅಳವಡಿಸಬೇಕಾಗಿರುತ್ತೆ.<br>5. ರೂ.1100.00 ಕೋಟಿ ಅಂದಾಜಿನಲ್ಲಿ ರೂ.987.63 ಕೋಟಿಗಳು ವೆಚ್ಚವನ್ನು ಭರಿಸಲಾಗಿರುತ್ತದೆ.</td></tr>
</table>

| ಕ್ರ ಸಂ | ಪ್ರಶ್ನೆ | ಉತ್ತರಗಳು | |
|---|---|---|---|
| | | ವಿಜಯನಗರ ಜಿಲ್ಲೆ (ಹೊಸಪೇಟೆ & ಕೂಡ್ಲಿಗಿ ತಾಲ್ಲೂಕು) | 1. ಜಾಕ್ ವೆಲ್ / ಪಂಪ್ ಹೌಸ್ ಕಾಮಗಾರಿಯು ಭೌತಿಕವಾಗಿ ಪೂರ್ಣಗೊಂಡಿರುತ್ತದೆ.<br>2. ಅಪ್ರೋಜ್ ಚಾನಲ್ ಭಾಗಶಃ ಪೂರ್ಣಗೊಂಡಿರುತ್ತದೆ.<br>3. Raw water rising main : ಭೌತಿಕವಾಗಿ ಪೂರ್ಣಗೊಂಡಿರುತ್ತದೆ.<br>4. WTP other components : ಭೌತಿಕವಾಗಿ ಪೂರ್ಣಗೊಂಡಿರುತ್ತದೆ. ಅಪ್ರೋಜ್ ರೋಡ್, ಕ್ಲೋರಿನೇಷನ್ ಯುನಿಟ್ ಪ್ರಗತಿಯಲ್ಲಿರುತ್ತದೆ. SCADA ಅನುಷ್ಠಾನ ಪ್ರಗತಿಯಲ್ಲಿರುತ್ತದೆ<br>5. Distribution network: ಭೌತಿಕವಾಗಿ ಪೂರ್ಣಗೊಂಡಿರುತ್ತದೆ.<br>6. ZBT/ZBR/MBR : ಭೌತಿಕವಾಗಿ ಪೂರ್ಣಗೊಂಡಿರುತ್ತದೆ.<br>7. ಪ್ರಸ್ತುತ ಒಟ್ಟಾರೆಯಾಗಿ ಈ ಯೋಜನೆಯು ಪೂರ್ಣಗೊಳ್ಳುವ ಹಂತದಲ್ಲಿದ್ದು, ಟೆಸ್ಟ ರನ್ ಪ್ರಗತಿಯಲ್ಲಿರುತ್ತದೆ.<br>8. ಈ ಯೋಜನೆಗೆ ವಿಜಯನಗರ ಜಿಲ್ಲೆಗೆ ರೂ.761.63 ಕೋಟಿ ಅಂದಾಜಿನಲ್ಲಿ ರೂ.679.85 ಕೋಟಿಗಳು ವೆಚ್ಚವನ್ನು ಭರಿಸಲಾಗಿರುತ್ತದೆ. |
| ಇ | ಯೋಜನೆಯಡಿ ಅಪೂರ್ಣಗೊಂಡಿರುವ ಕಾಮಗಾರಿಗಳನ್ನು ಪೂರ್ಣಗೊಳಿಸಲು ಬೇಕಾಗಿರುವ ಸಮಯವೆಷ್ಟು; ಪೂರ್ಣ ಮಾಹಿತಿ ನೀಡುವುದು; | ಯೋಜನೆಯ ಬಹುತೇಕ ಪೂರ್ಣಗೊಂಡಿದ್ದು, ಅಂತಿಮ ಪೈಪ್‌ಲೈನ್ ಸಂಪರ್ಕಗಳು ವಿವಿಧ ಇಲಾಖೆಗಳ ಅನುಮತಿಗಾಗಿ ಬಾಕಿ ಇರುತ್ತದೆ. ಅವುಗಳನ್ನು ತ್ವರಿತಗತಿಯಲ್ಲಿ ಕೈಗೊಂಡು ಪೂರ್ಣಗೊಳಿಸಲು ಕ್ರಮ ಕೈಗೊಂಡಿದ್ದು, ಯೋಜನೆಯನ್ನು ಪೂರ್ಣಗೊಳಿಸಲು ಸುಮಾರು 6 ತಿಂಗಳುಗಳ ಕಾಲಾವಕಾಶ ಬೇಕಾಗಬಹುದು. | |
| ಈ | ಬರ ಪೀಡಿತ ತಾಲ್ಲೂಕುಗಳ ಜನತೆಗೆ ಕುಡಿಯುವ ನೀರು ಪೂರೈಸಲು ಸರ್ಕಾರ ತುರ್ತಾಗಿ ಯೋಜನೆಯನ್ನು ಪೂರ್ಣಗೊಳಿಸಿ ಸಾರ್ವಜನಕರಿಗೆ ಕುಡಿಯುವ ನೀರನ್ನು ಬಿಡಲು ಮುಂದಾಗುವುದೇ? (ಪೂರ್ಣ ವಿವರ ನೀಡುವುದು). | ಪ್ರಸ್ತುತ ಒಟ್ಟಾರೆಯಾಗಿ ಈ ಯೋಜನೆಯು ಪೂರ್ಣಗೊಳ್ಳುವ ಹಂತದಲ್ಲಿದ್ದು, Trial Run ಪ್ರಗತಿಯಲ್ಲಿರುತ್ತದೆ. ಮುಂದಿನ 6 ತಿಂಗಳೊಳಗೆ ಯೋಜನೆಯನ್ನು ಪೂರ್ಣಗೊಳಿಸಿ ಉದ್ದೇಶಿತ ತಾಲ್ಲೂಕುಗಳ ಜನತೆಗೆ ಕುಡಿಯುವ ನೀರು ಪೂರೈಸಲು ಯೋಜಿಸಲಾಗಿದೆ. | |

ಸಂಖ್ಯೆ:ಗ್ರಾಕುನೀ&ನೈಇ/ಮುಇಂ/ತಾಂತ್ರಿಕ/35/2024

(ಪ್ರಿಯಾಂಕ್ ಖರ್ಗೆ),
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ
ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು